ಉದ್ಧರಿಸಲಿಕ್ಕಾಗಿಯೇ ಬಾರಿಬಾರಿ ಜನ್ಮವೆತ್ತಿರುವ ನೀನು, ಈ ಪಾಪಿಯನ್ನೊಮ್ಮೆ ಕಣ್ಣೆತ್ತಿ ನೋಡು; ನನ್ನ ಬಿ.ಎ.ಯನ್ನು ನೀನೇ ತೆಗೆದುಕೊ; ಕ್ಲಾರ್ಕ್‌ತನವಲ್ಲವಾದರೆ ಅಪ್ಪನಿಗೆ ದಯಪಾಲಿಸಿದ ಪೀಯೋನುತನವನ್ನಾದರೂ ಮಗನಿಗೆ ದಯಪಾಲಿಸು' ಎಂದು ಬೇಡಿಕೊಂಡಿದ್ದ ನೂರಾರು ಬಾರಿ.

*****

ಗಂಧವನ್ನು ಯಾಂತ್ರಿಕವಾಗಿ ಹಣೆಗೆ ಹಚ್ಚಿಕೊಂಡು ಪಾಂಡುರಂಗರಾಯನನ್ನು ಕಂಡು ಉಂಟಾದ ಒಂದು ವಿಚಿತ್ರ ವ್ಯಗ್ರತೆಯೊಡನೆ ಅವನ ಮಗಳ ರೂಪು ಮನಸ್ಸಿನೊಳಗೆ ನೀಡುತ್ತಿದ್ದ ಒಂದು ಹಳೆಯ ತಂಪನ್ನು ಅನುಭವಿಸಿಕೊಂಡು ಹೊರಬಂದಾಗ ಚಪ್ಪಲಿಗಳು ಸುರಕ್ಷಿತವಾಗಿರುವುದನ್ನು ಕಂಡು ಆನಂದಿತನಾಗಿ ತನ್ನ ಬಡ ಆರು ರೂಪಾಯಿಯ ರಬ್ಬರ್ ಚಪ್ಪಲಿಗಳ ಪಕ್ಕದಲ್ಲಿ ವಿರಾಜಮಾನವಾಗಿದ್ದ ಎಂಬತ್ತು ರೂಪಾಯಿಯ ಮಿನುಗುವ ಕರಿಯ ಶೂಗಳನ್ನು ಕಂಡು ಹುಬ್ಬು ಗಂಟಿಕ್ಕಿದ; ಬೀದಿಗಿಳಿದಾಗ ನಾಲ್ಕೈದು ಹೆಣ್ಣುಗಳ ಗುಂಪಿನ ನಡುವೆ ಕರಿಬಣ್ಣದ ಪರ್ಸನ್ನು ಹಿಡಿದುಕೊಂಡು ಆಗತಾನೇ ಖರೀದಿಸಿದ ಮಲ್ಲಿಗೆಯ ಮಾಲೆಯನ್ನು ಮುಡಿಗೆ ಸಿಕ್ಕಿಸಿಕೊಳ್ಳುತ್ತಾ ಚಂಚಲೆ, ಕೊ–ಆಪರೇಟಿವ್ ಬ್ಯಾಂಕಿನಲ್ಲಿ ಆಫೀಸರ್ ಆಗಿರುವ ತನ್ನ ಉದ್ಯೋಗಕ್ಕೆ ಒಪ್ಪುವ ಉಡುಪು ತೊಡುಪು ಮತ್ತು ಶ್ರೀಮದ್ಗಾಂಭೀರ್ಯವುಳ್ಳವಳಾಗಿ, ಮಂದಗಮನೆಯಾಗಿ ಬರುತ್ತಿರುವುದನ್ನು ಮತ್ತು ಅವಳು ತನ್ನ ಕಡೆಗೊಮ್ಮೆ ದೃಷ್ಟಿ ಹಾಯಿಸಿದುದನ್ನು ನೋಡಿ ನಿಂತಲ್ಲೇ ಭೂಮಿಯು ಕುಸಿಯಬಾರದೆ, ಈ ಹವಾಯಿ ಚಪ್ಪಲಿಗಳೇ ಹಾವಾಗಿ ನನ್ನನ್ನು ಕಡಿಯಬಾರದೆ ಎಂದೆನಿಸಿತು ವೆಂಕಟರಮಣನಿಗೆ.

ದೇವರು ಕೆಲವೊಮ್ಮೆ ಪ್ರಾರ್ಥನೆಗಳನ್ನು ನೆರವೇರಿಸುತ್ತಾನೆ. ಭಕ್ತರದ್ದು ಮಾತ್ರವಲ್ಲ, ಭಕ್ತರಲ್ಲದವರದ್ದು ಕೂಡಾ. ಕೆಲವೊಮ್ಮೆ ಕೊಲೆಗಡುಕನ, ಕಳ್ಳನ ಮತ್ತು ದರೋಡೆಕೋರನ ಪ್ರಾರ್ಥನೆಯೂ ಫಲಿಸುತ್ತದೆ. ಕೊಲವೊಮ್ಮೆ ನಿರುದ್ಯೋಗಿಯ ಪ್ರಾರ್ಥನೆಯೂ ಫಲಕೊಡುತ್ತದೆ. ದೇವರು ಅವರವರಿಗೆ ಅವರವರು ಬೇಡಿದ್ದನ್ನು ಕೊಡುತ್ತಾನೆ. ಸಾಧ್ಯವಾದರೆ. ಬೇಡದವರಿಗೂ ಕೊಡುತ್ತಾನೆ. ಕೆಲವೊಮ್ಮೆ ಕೊಟ್ಟದ್ದಕ್ಕೆ ಸ್ವಲ್ಪ ಹೆಚ್ಚೇ ಎನ್ನುವಷ್ಟು ಬಿಲ್ ಮುರಿಸಿಕೊಳ್ಳುತ್ತಾನೆ. ವೆಂಕಟರಮಣ ಬಿ.ಎ. ಮಾಡಿದ ಮೇಲೆ 'ಸಂಭವಾಮಿ ಯುಗೇ ಯುಗೇ' ಎಂದಿದ್ದ ಕೃಷ್ಣನೊಡನೆ ಬೇಡಿಕೊಂಡು ಬಂದದ್ದು ಒಂದು ಉದ್ಯೋಗ. ಉದ್ಯೋಗವನ್ನು ಕೊಡುವ ದೇವರು ಶ್ರೀಕೃಷ್ಣ ಹೌದೆ ಅಲ್ಲವೆ ಎಂಬ ಸಂಶಯ ವೆಂಕಟರಮಣನನ್ನೊಮ್ಮೊಮ್ಮೆ ಬಾಧಿಸುತ್ತಿತ್ತಾದರೂ ಉದ್ಯೋಗಕ್ಕಾಗಿ ದೇವರನ್ನು ಬದಲಾಯಿಸುವ ಕೆಲಸಕ್ಕೆ ಅವನು ಹೋಗಲಿಲ್ಲ. ಹೇಗಿದ್ದರೂ ಹೆಚ್ಚುಕಡಮೆ ನಿರುದ್ಯೋಗಿಯಾಗಿಯೇ ಇದ್ದ ಶ್ರೀಕೃಷ್ಣ ಅಗತ್ಯವೆಂದು ಕಂಡುಬಂದಾಗ ಕುದುರೆ ತೊಳೆಯುವ ಉದ್ಯೋಗವನ್ನೂ ಸ್ವೀಕರಿಸಿ ಹದಿನೆಂಟು ದಿನದ ತನ್ನ ಉದ್ಯೋಗದಲ್ಲಿ ಎಲ್ಲರನ್ನೂ ಕೆಲಸಕ್ಕೆ ಹಚ್ಚಿ ದ್ವಾಪರವನ್ನೇ ಅಡಿಮೇಲು ಮಾಡಿದ್ದ. ಆದ್ದರಿಂದ ಅವನ ಸಾಮರ್ಥ್ಯವನ್ನು ಸಂದೇಹಿಸುವುದು ಸರಿಯಲ್ಲವೆಂದು ನಂಬಿದ್ದ, ವೆಂಕಟರಮಣ.

ಮರುದಿನ ಏಳುತ್ತಿರುವಾಗಲೇ ಶ್ರೀಕೃಷ್ಣ ಪರಮಾತ್ಮ, ಪಾಂಡುರಂಗರಾಯ, ಮತ್ತು ಚಂಚಲೆ ಈ ಮೂವರ ನೆನಪುಗಳ ಒಂದು ಮಿಕ್ಸ್ಚರು ತಲೆತುಂಬಿ ಗಂಟಲಿಗಿಳಿದಂತಾಗಿ ಹರಳೆಣ್ಣೆ ಕುಡಿದಂತೆನಿಸಿ ಶ್ರೀಕೃಷ್ಣನ ಮೇಲೆ ಅಸಾಧ್ಯ ಬೇಸರವುಂಟಾಗಿ ಹೊರಗಿಣಿಕಿ ನೋಡಿದಾಗ ಮುಂಗಾರಿನ ಆಕಾಶವನ್ನು ಗಲೀಜು ಮಾಡಿಹಾಕಿದ ಜೂನ್ ತಿಂಗಳ ವಿಕೃತರೂಪದ ಬಂಜೆಮೋಡಗಳನ್ನು ಕಂಡು, ಮನಸ್ಸಿನೊಳಗೂ ಮುಗಿಲ ಮಂಕು ನುಸುಳಿದಂತೆನಿಸಿ, ಹಾಲಿನ